ದಿನಾಂಕಃ **25-11-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಸಿ ಎಲ್ ಎಂ ವಕೀಲರಿಂದ,**

1) ನಾನು ಪಿಯುಸಿ ವ್ಯಾಸಂಗ ಮಾಡಿರುತ್ತೇನೆ. ನನ್ನ ತಂದೆಯ ಹೆಸರು ಅಂಜನಿಗೌಡ. ನನ್ನ ತಂದೆಯ ತಾತನ ಹೆಸರು ಹನುಮೇಗೌಡ. ನನ್ನ ತಂದೆಯ, ತಂದೆಯ ಹೆಸರು ಹನುಮೇಗೌಡ ತಮಯ್ಯ ಅಲಿಯಾಸ್ ಬೋರೆಗೌಡ. ನನ್ನ ತಾತನ ಅಣ್ಣ ತಮ್ಮಂದಿರು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ಹನುಮೇಗೌಡ ತಮಯ್ಯ ಅಲಿಯಾಸ್ ಬೋರೆಗೌಡ ಎಂದು ತೋರಿಸಲು ಯಾವುದಾದರು ದಾಖಲಾ ಇದೆಯಾ ಎಂಬ ಪ್ರಶ್ನೇಗೆ ಸಾಕ್ಷಿಯು ಕಂದಾಯ ದಾಖಲೆ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ತಾತನ ಹೆಸರು ಹನುಮೇಗೌಡ ಅಲಿಯಾಸ್ ತಮ್ಮಯ್ಯ

2) ನನ್ನ ತಂದೆಗೆ ನನ್ನ ತಾತನ ಕಡೆಯಿಂದ ಎಷ್ಟು ಆಸ್ತಿ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ತಾತನಿಗೆ ಐದು ಜನ ಗಂಡು ಮಕ್ಕಳು, ಅವರುಗಳ ಪೈಕಿ ಒಬ್ಬರು ಚಿಕ್ಕ ವಯಸ್ಸಿನಲ್ಲಿ ತೀರಿಕೊಂಡಿರುತ್ತಾರೆ. ಸದರಿಯವರು ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ದಿಃ 01.08.2013 ರಂದು ನನ್ನ ತಂದೆಯ ಸಹೋದರರು ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿಗಳನ್ನು ನೋಂದಾಯಿತ ವಿಭಾಗ ಪತ್ರದ ಮೂಲಕ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಸದರಿ ವಿಭಾಗ ಪತ್ರವನ್ನು ನೋಡಿ ಗುರುತಿಸಿದ ಕಾರಣ ವಿಭಾಗ ಪತ್ರವನ್ನು ನಿಪಿ-13 ಎಂದು ಗುರುತಿಸಲಾಯಿತು. ನಿಪಿ-13 ವಿಭಾಗ ಪತ್ರಕ್ಕೆ ನಾನು ಸಹ ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ಸದರಿ ವಿಭಾಗ ಪತ್ರವದಲ್ಲಿ ಸರ್ವೇ ನಂ. 36 ಮತ್ತು 37 ಆಸ್ತಿಗಳು ಮಾತ್ರ ವಿಭಾಗ ಆಗಿರುತ್ತವೆ ಎಂದರೆ ಸರಿ.

3) ಸರ್ವೇ ನಂ. 36/2 ರಲ್ಲಿ 2 ಎಕರೆ 14 ಗುಂಟೆ ಮತ್ತು ಸರ್ವೇ ನಂ. 37/2 ರಲ್ಲಿ 1 ಎಕರೆ 37 ಗುಂಟೆ ಅಸ್ತಿಗಳನ್ನು ನನ್ನ ಸಹೋದರರು ವಿಭಾಗ ಮಾಡಿಕೊಂಡಿರುತ್ತಾರೆ

ಎಂದರೆ ಸರಿ. ಸರ್ವೇ ನಂ. 36/2 ರಲ್ಲಿ 2 ಎಕರೆ 14 ಗುಂಟೆ ನನ್ನ ತಾತನ ಹೆಸರಿನಲ್ಲಿ 37 ಗುಂಟೆ ಎಸ್ ಬಿ ಅಂಜನಿಗೌಡ ರವರ ಹೆಸರಿನಲ್ಲಿ ಖಾತೆ ನಮೂದಾಗಿರುತ್ತದೆ ಎಂದರೆ ಸರಿ. ಸದರಿ ನಮೂದುಗಳು 2013 ರವರೆಗೆ ಇತ್ತು ಎಂದರೆ ಸರಿ. ಎಸ್ ಬಿ ಅಂಜನಿಗೌಡ ವಾದಿಯರ ತಂದೆ ಎಂದರೆ ಸರಿಯಲ್ಲ. ವಾದಿಯ ತಂದೆ ಎಸ್ ಬಿ ಅಂಜನಿಗೌಡ ಯಾರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯ ಹೆಸರಿನ ಮುಂದೆ ಯಾವುದೇ ಇನಿಶೀಯಲ್ ಇರಲಿಲ್ಲ ಎಂದರೆ ಸರಿ. ನನ್ನ ತಂದೆಯ ಹೆಸರು ಅಂಜನಿಗೌಡ ಎಂದು ಎಲ್ಲ ದಾಖಲಾತಿಗಳಲ್ಲಿ ನಮೂದಾಗಿರುತ್ತದೆ ಎಂದರೆ ಸರಿ.

4) ನನ್ನ ತಂದೆ ದಿಃ 12.02.2014 ರಂದು ನನ್ನ ಹೆಸರಿಗೆ ಹಕ್ಕು-ಬಿಡುಗಡೆ ಪತ್ರ ಬರೆದುಕೊಟ್ಟಿರುತ್ತಾರೆ. ಸದರಿ ಹಕ್ಕು-ಬಿಡುಗಡೆ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ನಿಪಿ-14 ಎಂದು ಗುರುತಿಸಲಾಯಿತು. ನಿಪಿ-14 ಹಕ್ಕು ಬಿಡುಗಡೆ ಪತ್ರ ನಿಪಿ-03 ದಾನ ಪತ್ರದಲ್ಲಿ ನನ್ನ ತಂದೆಯ ಹೆಸರು ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ದಾಖಲೆಗಳಲ್ಲ್ ನನ್ನ ತಂದೆಯ ಹೆಸರು ಎಸ್ ಬಿ ಅಂಜನಿಗೌಡ ಎಂದು ನಮೂದಾಗಿರುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ